ಪಡೆದುಕೊಂಡಿರುವ ಅಂಗೀರಸನ್ನು ಸಮೀಪಿಸುತ್ತಾನೆ ಹಾಗೂ ಈ ಮುಂದಿನ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ: "ಪೂಜ್ಯರೇ, ಯಾವುದನ್ನು ತಿಳಿದುಕೊಂಡರೆ ಎಲ್ಲವನ್ನೂ ತಿಳಿದುಕೊಂಡಂತೆ ಆಗುತ್ತದೆ?" ಇದಕ್ಕೆ ಉತ್ತರರೂಪದಲ್ಲಿ ಅಂಗೀರಸನು "ಎರಡು ರೀತಿಯ ವಿದ್ಯೆಗಳನ್ನು ತಿಳಿದುಕೊಳ್ಳಬೇಕು, ಒಂದು ಪರಾವಿದ್ಯೆ, ಮತ್ತೊಂದು ಅಪರಾವಿದ್ಯೆ" ಎಂದು ತನ್ನ ಬೋಧನೆಯನ್ನು ಪ್ರಾರಂಭಿಸುತ್ತಾನೆ. ಪರಾವಿದ್ಯೆಯೆಂದರೆ ಜಗತ್ಕಾರಣನಾದ 'ಬ್ರಹ್ಮ'ವನ್ನು ತಿಳಿದುಕೊಳ್ಳುವುದು. ಇದನ್ನೇ 'ಪರಮಾತ್ಮವಿದ್ಯೆ'ಯೆಂದೂ ಹೆಸರಿಸಬಹುದು. ಬ್ರಹ್ಮಕ್ಕೆ ಹೊರ ತಾದ ಲೌಕಿಕ ಜ್ಞಾನವೇ 'ಅಪರಾ ವಿದ್ಯೆ', ಅಂದರೆ, ಕರ್ಮ–ಉಪಾಸನೆ, ಸ್ವರ್ಗ–ದೇವಲೋಕ ಮುಂತಾದ ಸಂಗತಿಗಳ ಬಗ್ಗೆ ವಿಚಾರ ಮಾಡುವ ವಿದ್ಯೆ. ಗುರುವು ಇಲ್ಲಿ ತುಂಬು ವಿನಮ್ರತೆಯನ್ನು ತೋರುತ್ತಾರೆ. **ಇತಿ ಹ ಸ್ಮ ಯದ್ ಬ್ರಹ್ಮವಿದೋ ವದಂತಿ** ಅಂದರೆ, 'ಹೀಗೆ ಬ್ರಹ್ಮಜ್ಞಾನಿಗಳು ಹೇಳುತ್ತಾರೆ' ಎಂದು ನಿವೇದಿಸುತ್ತಾರೆ. ಇದು ಅವರಲ್ಲಿನ ವಿನಯ ಮತ್ತು ಗುರು ಪರಂಪರೆಯಲ್ಲಿನ ಶ್ರದ್ಧೆಯ ದ್ಯೋತಕವಾಗಿದೆ.

ಅಪರಾವಿದ್ಯೆಯಲ್ಲಿ ಈ ಜಗತ್ತಿಗೆ ಸಂಬಂಧಪಟ್ಟ ಸಮಸ್ತ ಜ್ಞಾನವಿಶೇಷಗಳೂ ಸೇರಿವೆ – ನಾಲ್ಕು ವೇದಗಳು, ವೇದಾಂಗಗಳಾದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ್ಯ ಇವೆಲ್ಲವೂ ಅಪರಾ ವಿದ್ಯೆಗೆ ಸೇರಿದವೇ ಆಗಿವೆ. ಈ ವಿದ್ಯೆಯು ಅದೆಷ್ಟು ವ್ಯಾಪಕವಾಗಿದ್ದರೂ, ಅಪೂರ್ಣವಾದುದು ಎಂದೇ ಉಪನಿಷತ್ತು ಹೇಳುತ್ತದೆ. ಇದಕ್ಕೆ ಭಿನ್ನವಾಗಿ ಜಗತ್ತಿನ ಸರ್ವ ವಸ್ತುಗಳಿಗೂ ಆಧಾರವಾದ 'ಅಕ್ಷರಬ್ರಹ್ಮ' ವನ್ನು ತಿಳಿಸಿಕೊಡುವುದೇ ಪರಾವಿದ್ಯೆ. ಅಕ್ಷರಬ್ರಹ್ಮವು ನಾಶವಿಲ್ಲದ್ದು, ಇಂದ್ರಿಯಗಳಿಗೆ ಅತೀತವಾದದ್ದು, ಸೂಕ್ಷ್ಮವಾದುದು, ಎಲ್ಲ ಸ್ಥಿರ–ಚರಗಳಲ್ಲಿ ವಿವಿಧ ರೂಪಗಳಿಂದ ರಾರಾಜಿಸುತ್ತಿರುವುದು (ವಿಭುಃ). ಈ ಸರ್ವಜ್ಞರೂಪವು ಹೇಗೆ ಸಮಸ್ತ ಪ್ರಾಣಿಗಳಿಗೆ ಕಾರಣವಾಗಿದೆ ಎಂಬುದನ್ನು ಜೇಡರ ಬಲೆಯ ದೃಷ್ಟಾಂತದ ಮೂಲಕ ಮುಂಡಕೋಪನಿಷತ್ತು ವಿವರಿಸುತ್ತದೆ. ಹಾಗೆಯೇ ಆಮೂಲಕ, ಸೃಷ್ಟಿಯಾದ ಜಗತ್ತೆಲ್ಲವೂ ಅನಿಯಮಿತವಾಗಿ ಉಂಟಾದದ್ದಲ್ಲವೆಂದೂ, ಒಂದು ನಿರ್ದಿಷ್ಟ ಕ್ರಮದಲ್ಲಿಯೇ ಹುಟ್ಟುತ್ತದೆಯೆಂದೂ ತಿಳಿಸಿಕೊಡುತ್ತದೆ. ಇಂಥ ಪರಾವಿದ್ಯೆಯ ಬೋಧನೆ ಕಠೋಪನಿಷತ್ತು, ಶ್ವೇತಾಶ್ವತರ ಉಪನಿಷತ್ತು ಮುಂತಾದ ಬೇರೆ ಬೇರೆ ಕಡೆಗಳಲ್ಲಿಯೂ ನಮಗೆ ದೊರಕುತ್ತದೆ.


ಮೊದಲನೆಯ ಮುಂಡಕದ ಎರಡನೆಯ ಖಂಡದಲ್ಲಿ ಅಪರಾ ವಿದ್ಯೆಯ ಕಾರ್ಯಗಳಾದ ಅವಿದ್ಯೆ, ಕಾಮ, ಕರ್ಮ ಮತ್ತು ಅದರ ಫಲಗಳ ಬಗ್ಗೆ ವಿವರಣೆಯನ್ನು ನೋಡುತ್ತೇವೆ. ಹಾಗೆಯೇ ಅಗ್ನಿಹೋತ್ರವೇ ಮುಂತಾದ ಸರ್ವ ಕರ್ಮಗಳ ಇಣುಕು ನೋಟ ಇಲ್ಲಿ ನಮಗೆ ದೊರಕುತ್ತದೆ. "ಕರ್ಮನಿಷ್ಠನಾಗಿದ್ದುಕೊಂಡು, ಯಾಗಾದಿಗಳನ್ನು ಮಾಡುವ ಯಜಮಾನನನ್ನು ಚೆನ್ನಾಗಿ ಬೆಳಗುತ್ತಿರುವ ಆಹುತಿಗಳು, ಸೂರ್ಯರಶ್ಮಿಗಳ ಮೂಲಕ, 'ಬಾ, ಬಾ' ಎಂದು ಪ್ರಿಯವಾದ ಮಾತುಗಳನ್ನು ಆಡುತ್ತ ಕರೆದುಕೊಂಡು ಹೋಗುತ್ತವೆ" ಎಂದು ಇಲ್ಲಿ ಹೇಳಿದೆ. ಆದರೆ, ಹೀಗೆ ಕೇವಲ ಕರ್ಮಾಸಕ್ತಿಯಲ್ಲಿ ನಿರತರಾದವರು ಮೂಢರು. ಅವರು ತಾವು ಗಳಿಸಿದ ಸ್ವರ್ಗ ಫಲವನ್ನು ಅನುಭವಿಸಿದ ಬಳಿಕ ಪುನಃ ಜರಾ–ಮೃತ್ಯುಗಳಿರುವ ಸಂಸಾರಚಕ್ರದಲ್ಲಿ ಬಂದುಬೀಳುತ್ತಾರೆ.

ಯಜ್ಞಯಾಗಾದಿಗಳು ಹೇಗೋ, ಹಾಗೆಯೇ ಇಷ್ಟಾಪೂರ್ತಿಗಳು, ಅಂದರೆ ಶ್ರೌತ–ಸ್ಮಾರ್ತ ಕರ್ಮಗಳು ಕೂಡ ನಿಷ್ಪ್ರಯೋಜಕವೆಂದೇ ಉಪನಿಷತ್ತು ಪರಿಗಣಿಸುತ್ತದೆ. ಹಾಗೆಯೇ ತಪಸ್ಸು ಮತ್ತು ಶ್ರದ್ಧೆಗಳಿಂದ ವಿಹಿತರಾಗಿದ್ದರೂ, ಜ್ಞಾನಶೂನ್ಯರಾಗಿರುವವರು, ಹಿರಣ್ಯಗರ್ಭ ಲೋಕವನ್ನು ಪಡೆಯುವುದು ಕೂಡ ಆತ್ಯಂತಿಕ ಮೋಕ್ಷವಲ್ಲವೆಂದೇ ಉಪನಿಷತ್ತಿನ ಅಭಿಪ್ರಾಯ. ಹಾಗಾದರೆ ಆತ್ಯಂತಿಕ ಮೋಕ್ಷವನ್ನು ಸಂಪಾದಿಸುವ ದಾರಿ ಯಾವುದು? ಮೊದಲು ಜಿಜ್ಞಾಸುವಾದವನು ನಿತ್ಯಾನಿತ್ಯ ವಿವೇಕವನ್ನು ಬೆಳೆಸಿಕೊಳ್ಳಬೇಕು. ನಿತ್ಯವಾದದ್ದನ್ನು ತಿಳಿದುಕೊಳ್ಳಲು, ಶಿಷ್ಯತ್ವವನ್ನು ಅವಲಂಬಿಸಿ, ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವನ್ನು ಅನ್ವೇಷಿಸಬೇಕು. ಹೀಗೆ ವಿಧಿವತ್ತಾಗಿ ಸಮೀಪಿಸಿದ ಶಿಷ್ಯನಿಗೆ ಸದ್ಗುರುವು ಬ್ರಹ್ಮವಿದ್ಯೆಯನ್ನು ಯಥಾವತ್ತಾಗಿ ಬೋಧಿಸಬೇಕು.

ಈ ಉಪನಿಷತ್ತಿನಲ್ಲಿ ಗುರು ಮತ್ತು ಶಿಷ್ಯರ ಯೋಗ್ಯತೆಯ ಬಗ್ಗೆ ಒತ್ತಿ ಹೇಳಲಾಗಿದೆ. ಶ್ರೀರಾಮಕೃಷ್ಣ ಪರಮಹಂಸರಂಥ ಅಸಾಧಾರಣ ಗುರುಗಳ ವೈಯಕ್ತಿಕ ಮಾರ್ಗದರ್ಶನವು ಯುವಕ ನರೇಂದ್ರನನ್ನು ವಿಶ್ವವಿಖ್ಯಾತ ಸ್ವಾಮಿ ವಿವೇಕಾನಂದರಾಗಿ ಪರಿವರ್ತಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು. ಗುರುವಿನ ಪ್ರೀತಿ, ಚಿಂತನೆ ಮತ್ತು ಮಾತುಗಳು ಅವರಲ್ಲಿ ಆಧ್ಯಾತ್ಮಿಕ ಪ್ರೌಢಿಮೆಯನ್ನು ಮೂಡಿಸಿತು. ಹಾಗೆಯೇ ಅವರಲ್ಲಿ ಹುದುಗಿದ್ದ ಧೈರ್ಯೋತ್ಸಾಹ, ಏಕಾಗ್ರತೆ ಮತ್ತು ವೈಚಾರಿಕತೆಗಳೂ ಜಾಗೃತವಾದವು. ಈ ನಿಟ್ಟಿನಲ್ಲಿ ಶ್ರೀರಾಮಕೃಷ್ಣರೇ ಹೀಗೆ ಹೇಳುತ್ತಾರೆ: "ನಾನು ಹೇಳಿದ ಮಾತ್ರಕ್ಕೆ ಎಲ್ಲವನ್ನೂ ಒಪ್ಪಿಕೊಂಡುಬಿಡಬೇಡಿ. ಸ್ವತಃ ಪರೀಕ್ಷಿಸಿ ನೋಡಿ. ಸಮ್ಮತಿ ಅಥವಾ ಅಸಮ್ಮತಿಯ ಮೂಲಕ ಗುರಿ ಸಾಧನೆ ಆಗಬಾರದು. ಅದೇನಿದ್ದರೂ ನೈಜ ಮತ್ತು ನಿರ್ದಿಷ್ಟ ಸಾಧನೆಯಾಗಿರಬೇಕು." (ಮುಂದುವರಿಯುವುದು)

**ಮುಂಡಕ ಉಪನಿಷತ್ತು ನಿಮ್ಮನ್ನು ಇಂದ್ರಿಯಗಳಾಚೆ, ರವಿತಾರೆಗಳಾಚೆ ಅತ್ಯಂತ ಭವ್ಯವಾಗಿರುವ ನೆಲೆಗೆ ಕೊಂಡೊಯ್ಯುವುದು. ಮೊದಲು ಅಂಗಿರಸನು, 'ಭೂಮಿಯು ಭಗವಂತನ ಪಾದ', 'ಆಕಾಶವೇ ಅವನ ಮಸ್ತಕ' ಎಂಬಿತ್ಯಾದಿಯಾಗಿ ಇಂದ್ರಿಯ ಗ್ರಾಹ್ಯವಾಗಿ ಭಗವಂತನ ಭವ್ಯತೆಯನ್ನು ವರ್ಣಿಸುತ್ತಾನೆ. ಆದರೆ ಅದು ಅವನಿಗೆ ತೃಪ್ತಿಯನ್ನು ನೀಡುವುದಿಲ್ಲ. ಮೊದಲು ಈ ರೀತಿಯ ವಿವರಣೆಯನ್ನಿತ್ತು ನಿಧಾನವಾಗಿ ಮೇಲೆಮೇಲಕ್ಕೆ ಕರೆದುಕೊಂಡು ಹೋಗಿ ಅತ್ಯುನ್ನತ 'ನೇತಿ ನೇತಿ' ಭಾವನೆಯನ್ನು ನೀಡುತ್ತಾನೆ.**

**– ಸ್ವಾಮಿ ವಿವೇಕಾನಂದ**





ವಿವೇಕಾನಂದ ಚಿಂತನ

# ತವರೂರಿನಲ್ಲಿ ಧೀರತೆಯ ದುಂದುಭಿ

ಸ್ವಾಮಿ ವಿವೇಕಾನಂದರು ಚೆನ್ನೈನಿಂದ ೧೮೯೭ರ ಫೆಬ್ರವರಿ ೧೯ರಂದು ತಮ್ಮ ಹುಟ್ಟೂರಾದ ಕೊಲ್ಕತಾಗೆ ಬಂದರು. ಅವರಿಗೆ ೧೮೯೭ರ ಫೆಬ್ರವರಿ ೨೮ ರಂದು ಕೊಲ್ಕತಾದ ನಾಗರಿಕರ ಪರವಾಗಿ ಅಭೂತಪೂರ್ವ ಸ್ವಾಗತವನ್ನು ನೀಡಲಾಯಿತು. ಅಂದು ತಮಗೆ ನೀಡಿದ ಬಿನ್ನವತ್ತಳೆಗೆ ಉತ್ತರವಾಗಿ ಸ್ವಾಮೀಜಿ ಭಾಷಣ ಮಾಡಿದರು. ಅದರ ವಿಷಯ ಹೀಗಿತ್ತು:

**ನಾನು ನಿಮ್ಮ ಸಹೋದರನೇ :** ಬಿನ್ನವತ್ತಳೆಯಲ್ಲಿ ಸ್ವಾಮೀಜಿಯವರನ್ನು 'ಪ್ರಿಯ ಸಹೋದರರೇ' ಎಂದು ಸಂಬೋಧಿಸಲಾಗಿತ್ತು. ಅದಕ್ಕಾಗಿ ಸ್ವಾಮೀಜಿ, ಕೊಲ್ಕತಾದ ಜನತೆಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತ ಹೀಗೆ ಹೇಳುತ್ತಾರೆ: "ಹೌದು, ನಾನು ನಿಮ್ಮ ಸಹೋದರ, ನೀವು ನಮ್ಮ ಸಹೋದರರು" ಎಂದು. ಹಾಗೆಯೇ, "ಇಲ್ಲಿಗೆ ಬರುವುದಕ್ಕಿಂತ ಮುಂಚೆ ಭರತಖಂಡವನ್ನು ಪ್ರೀತಿಸುತ್ತಿದ್ದೆ. ಈಗ ಭಾರತಭೂಮಿಯ ದೂಳು ಕೂಡ ಪವಿತ್ರವಾಗಿದೆ, ಬೀಸುವ ಗಾಳಿ ಪವಿತ್ರವಾಗಿದೆ, ಈ ಪುಣ್ಯಭೂಮಿ ನನ್ನ ತೀರ್ಥಕ್ಷೇತ್ರವಾಗಿದೆ" ಎಂದು ತಮ್ಮ ಹೃದಯಾಂತರಾಳದ ಭಾವನೆಗಳನ್ನು ಸ್ವಾಮೀಜಿ ಹೊರಗೆಡಹುತ್ತಾರೆ.

**ಪ್ರತಿಯೊಂದು ಜನಾಂಗದಲ್ಲಿಯೂ ವೈಶಿಷ್ಟ್ಯವಿದೆ :** ಅಮೆರಿಕ ದೇಶದ ತಮ್ಮ ಅನುಭವವನ್ನು ಹೇಳುತ್ತ, ಸ್ವಾಮೀಜಿ ಹೀಗೆ ನುಡಿಯುತ್ತಾರೆ: "ಪ್ರತಿಯೊಂದು ಜನಾಂಗದ ಆಚಾರ ವ್ಯವಹಾರಗಳು ಹಲವು ಶತಮಾನಗಳಿಂದ ಸಾವಧಾನವಾಗಿ ಬೆಳೆದುಬಂದಿವೆ. ಪ್ರತಿಯೊಂದರ ಹಿಂದೆಯೂ ಆಳವಾದ ಅರ್ಥವಿದೆ. ಆದಕಾರಣ ಬೇರೆಯವರು ನಮ್ಮ ರೀತಿನೀತಿಗಳನ್ನು ಅಲ್ಲಗಳೆಯುವುದಾಗಲಿ, ನಾವು ಅವರ ರೀತಿನೀತಿಗಳನ್ನು ಅಲ್ಲಗಳೆಯುವುದಾಗಲಿ ಮಾಡಕೂಡದು." ಹೀಗೆ ಸ್ವಾಮೀಜಿ ವಿಶ್ವಭ್ರಾತೃತ್ವದ ಆದರ್ಶವನ್ನು ಸಭಿಕರ ಮುಂದೆ ಇಡುತ್ತಾರೆ.

**ನನ್ನ ಜೀವನಾದರ್ಶರಾದ ನನ್ನ ಗುರುದೇವ:** ಈ ಸಂದರ್ಭದಲ್ಲಿ ಸ್ವಾಮೀಜಿ ತಮ್ಮ ಗುರುದೇವರಾದ ಶ್ರೀರಾಮಕೃಷ್ಣ ಪರಮಹಂಸರನ್ನು ಕುರಿತು ಮನದಾಳದಿಂದ ಬಂದ ಭಾವುಕ ಮಾತುಗಳನ್ನು ಆಡುತ್ತಾರೆ: "ನಾನು ಯಾವುದಾದರೂ ಸತ್ಕರ್ಮವನ್ನು ಮಾಡಿದ್ದರೆ, ನನ್ನ ಬಾಯಿಯಿಂದ ಯಾರಿಗಾದರೂ ಸಹಾಯವಾಗುವಂತಹ ನುಡಿಯೊಂದು ಹೊರಟಿದ್ದರೆ, ಅದು ನನ್ನದಲ್ಲ, ಅದೆಲ್ಲ ಅವರದು" ಎನ್ನುತ್ತಾರೆ. ಶ್ರೀರಾಮಕೃಷ್ಣರು ಮಹಾವ್ಯಕ್ತಿಗಳಲ್ಲೆಲ್ಲ ಉಜ್ವಲವಾಗಿ ಬೆಳಗುವವರು ಎಂದು ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುವ ಸ್ವಾಮೀಜಿ, ಶ್ರೀರಾಮಕೃಷ್ಣರ ರೂಪಿನಲ್ಲಿ ಆವಿರ್ಭೂತವಾದ ಒಂದು ಮಹಾನ್ ಶಕ್ತಿಯು ಈ ಜಗತ್ತಿನಲ್ಲಿ ಅದ್ಭುತ ಲೀಲೆಯನ್ನು ಆಡುವುದು ಎಂಬ ಭವಿಷ್ಯವಾಣಿಯನ್ನು ನುಡಿಯುತ್ತಾರೆ. ಹಾಗೆಯೇ, ಅವರು ಆಧುನಿಕ ಭಾರತದ ಆಧ್ಯಾತ್ಮಿಕ ಆದರ್ಶ ಎಂದೂ ಕರೆಯುತ್ತಾರೆ. ನಮ್ಮ ಜನಾಂಗದ ಹಿತಕ್ಕೆ, ದೇಶದ ಹಿತಕ್ಕೆ ಈ ಮಹಾನ್ ಆದರ್ಶವನ್ನು ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ನಾವೇ ನಿಷ್ಕರ್ಷಿಸಿಕೊಳ್ಳಬೇಕೆಂದೂ ತಿಳಿಹೇಳುತ್ತಾರೆ.

**ಉತ್ತಿಷ್ಠತ, ಜಾಗ್ರತ – ಏಳಿ, ಜಾಗೃತರಾಗಿ :** ಕೊಲ್ಕತಾದ ಯುವಕರಿಗೆ ಸ್ವಾಮೀಜಿ ನೀಡಿದ ಕರೆ ಇದು: "ಭರತಖಂಡವು ಜಗತ್ತನ್ನು ಗೆಲ್ಲಬೇಕು... ನಮ್ಮ ಶಾಸ್ತ್ರಗಳ ಸತ್ಯವನ್ನು ವಿದೇಶೀಯರಿಗೆ ಬೋಧಿಸುವುದೇ ನಮ್ಮ ನಿರಂತರವಾದ ವಿದೇಶೀನೀತಿಯಾಗಬೇಕು... ನಾವು ಹೊರಗೆ ಹೋಗಬೇಕು. ಕೊಟ್ಟುಕೊಳ್ಳುವುದರಲ್ಲಿಯೇ ರಹಸ್ಯ ಅಡಗಿದೆ... (ಅದಕ್ಕಾಗಿ) ಏಳಿ, ಜಾಗೃತರಾಗಿ, ಗುರಿಯನ್ನು ಸೇರುವವರೆಗೆ ನಿಲ್ಲಬೇಡಿ... ನಮ್ಮ ದೇಶಕ್ಕೆ ಅದ್ಭುತ ತ್ಯಾಗ ಬೇಕಾಗಿದೆ. ಯುವಕರು ಮಾತ್ರ ಇದನ್ನು ಮಾಡಬಲ್ಲರು. ಆಶಿಷ್ಠ, ದೃಢಿಷ್ಠ, ಬಲಿಷ್ಠ ಮೇಧಾವಿಗೆ ಮಾತ್ರ ಈ ಕೆಲಸ ಮೀಸಲಾಗಿದೆ... ಏಳಿ ಜಾಗೃತರಾಗಿ, ಪ್ರಪಂಚ ನಿಮ್ಮನ್ನು ಕರೆಯುತ್ತಿದೆ. ಆದಕಾರಣ, ಶ್ರದ್ಧೋತ್ಸಾಹಗಳಿಂದ ಜಾಗೃತರಾಗಿ... ಇಡೀ ಪ್ರಪಂಚವೇ ಮನುಷ್ಯನ ಶಕ್ತಿ, ಉತ್ಸಾಹ, ಶ್ರದ್ಧೆ – ಇವುಗಳಿಂದ ಆಗಿದೆ."

**ಶ್ರದ್ಧೆ ಮತ್ತು ನಿರ್ಭಯತೆ – ಇಂದಿನ ಆವಶ್ಯಕತೆಗಳು:** ಮುಂದುವರೆದು, ಕಠೋಪನಿಷತ್ತಿನಲ್ಲಿ ಬರುವ, ನಚಿಕೇತನಲ್ಲಿ ಉಂಟಾದ ರೀತಿಯ ಶ್ರದ್ಧೆಯೇ ಇಂದು ನಮಗೆ ಬೇಕಾಗಿರುವುದು ಎಂದು ಸ್ವಾಮೀಜಿ ಹೇಳುತ್ತಾರೆ. ಇದು ಕಾಣೆಯಾಗಿರುವುದರಿಂದಲೇ ಭಾರತವು ಅಧೋಗತಿಗೆ ಬಂದಿದೆ. ಎಲ್ಲ ಮತಗಳೂ, ಆತ್ಮವು ಚಿರಂತನವಾದುದು ಮತ್ತು ಎಲ್ಲ ಬಗೆಯ ಶಕ್ತಿಯನ್ನು ಹೊಂದಿರುವುದು ಎಂದು ಬೋಧಿಸುತ್ತವೆ. ಅದು ವ್ಯಕ್ತವಾಗಬೇಕು, ಅಷ್ಟೇ. ಅಂತಹ ಆತ್ಮಶ್ರದ್ಧೆ ನಮಗಿಂದು ಬೇಕಾಗಿದೆ. ಹಾಗೆಯೇ, ಯಾವುದಕ್ಕೂ ಅಂಜಬೇಡಿ ಎಂದು ಸ್ವಾಮೀಜಿ ಯುವಕರಿಗೆ ಕರೆ ಕೊಡುವರು. ಈ ಸಂದರ್ಭದಲ್ಲಿ ಅವರ ವೀರವಾಣಿ ಹೀಗೆ ಮೊಳಗುತ್ತದೆ: **"ನೀವು ಅದ್ಭುತ ಕಾರ್ಯಗಳನ್ನು ಸಾಧಿಸುತ್ತೀರಿ. ಅಂಜಿದೊಡನೆಯೇ ಕೆಲಸಕ್ಕೆ ಬಾರದವರಾಗುತ್ತೀರಿ. ಪ್ರಪಂಚದ ದುಃಖಕ್ಕೆ ಮುಖ್ಯಕಾರಣವೇ ಈ ಅಂಜಿಕೆ. ಇದೇ ಎಲ್ಲಕ್ಕಿಂತ ಹೆಚ್ಚಿನ ಮೂಢನಂಬಿಕೆ. ನಿಮ್ಮ ಕಷ್ಟಕ್ಕೆಲ್ಲಾ ಕಾರಣವೇ ಈ ಅಂಜಿಕೆ. ನಿರ್ಭಯತೆ ಈ ಕ್ಷಣವೇ ಸ್ವರ್ಗವನ್ನು ಧರೆಗೆ ಇಳಿಸುವುದು. ಆದಕಾರಣ, 'ಏಳಿ, ಎಚ್ಚರಗೊಳ್ಳಿ, ಗುರಿಯನ್ನು ಮುಟ್ಟುವವರೆಗೂ ನಿಲ್ಲದಿರಿ.' "**

ಕೆಲವು ದಿನಗಳ ನಂತರ ಸ್ವಾಮೀಜಿ, **'ವೇದಾಂತ ದರ್ಶನದ ವಿವಿಧ ಮುಖಗಳು'** ಎಂಬ ವಿಷಯವಾಗಿ ಇನ್ನೊಂದು ಪ್ರವಚನವನ್ನು ನೀಡಿದರು. ವೇದಾಂತ ತತ್ತ್ವದ ಬಗ್ಗೆ ಹಲವಾರು ಪ್ರಮುಖ ಅಂಶಗಳನ್ನು ಸ್ವಾಮೀಜಿ ಈ ಪ್ರವಚನದಲ್ಲಿ ವಿವರಿಸುತ್ತಾರೆ.

**ವೇದಾಂತದ ಪ್ರಭಾವ :** ಸ್ವಾಮೀಜಿ ಈ ಪ್ರವಚನವನ್ನು ಅತ್ಯಂತ ಮನೋಹರ ನುಡಿಗಳಿಂದ ಆರಂಭಿಸುತ್ತಾರೆ: "ಮುಂಜಾನೆ ಯಾರಿಗೂ ಕಾಣದ, ಯಾರ ಅರಿವಿಗೂ ಬಾರದ ಹಿಮಮಣಿಯು ಅತಿ ಸುಂದರವಾದ ಗುಲಾಬಿಯನ್ನು ಅರಳಿಸುವಂತೆ, ಭರತಖಂಡದ